ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2018–19 :** **ದಿನಾಂಕ : 2–08–2018**

# ಪತ್ರಿಕಾ ಆಮಂತ್ರಣ

1. "Drinking water, Sanitation, Hygiene and Housing Conditions" and "Survery of Persons with Disabilities" ಎಂಬ ವಿಷಯಗಳ ಕುರಿತು ರಾಷ್ಟ್ರೀಯ ಮಾದರಿ ಸಮೀಕ್ಷೆ 76ನೇ ಸುತ್ತಿನ ರಾಜ್ಯಮಟ್ಟದ ತರಬೇತಿ ಕಾರ್ಯಾಗಾರ ಉದ್ಘಾಟನೆ.

   ದಿನಾಂಕ: 03–08–2018, ಶುಕ್ರವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ.

   ಸ್ಥಳ: ಹೆಚ್.ಆರ್. ಹರಕೇರಿ ಸಭಾಂಗಣ, ಕೃಷಿ ತಂತ್ರಜ್ಞರ ಸಂಸ್ಥೆಯ ಸಭಾಂಗಣ (ಐಎಟಿ) ನಂ 15, ಕ್ವೀನ್ಸ್ ರಸ್ತೆ, ಬೆಂಗಳೂರು – 560 052.

2. ಪತ್ರಿಕಾಗೋಷ್ಠಿ:

   **ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಬಹಿರಂಗ ವಿಚಾರಣೆಯ ಅಧಿವೇಶನ ಕುರಿತು**

   **ಶ್ರೀ ಹೆಚ್.ಎಲ್. ದತ್ತು**
   **ಅಧ್ಯಕ್ಷರು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ**

   **ದಿನಾಂಕ: 3–8–2018, ಶುಕ್ರವಾರ, ಸಮಯ: ಅಪರಾಹ್ನ 12–00 ಗಂಟೆಗೆ**
   **ಸ್ಥಳ: ಕೊಠಡಿ ಸಂಖ್ಯೆ 419, ವಿಕಾಸ ಸೌಧ, ಬೆಂಗಳೂರು**

3 Curtain Raiser Press conference

   Bengaluru Tech Summit – 2018

   K.J. George,
   Minister for Large & Medium Scale Industries, Sugar, IT & BT and Science and Technology.

Date: 03-08-2018, Friday, Time: 12.30 pm

Place: Taj West End, Race Course Road, Bengaluru-560 001.

## ಪತ್ರಿಕಾ ಪ್ರಕಟಣೆ

## ಆಗಸ್ಟ್ 29ರಂದು 105 ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ

ಬೆಂಗಳೂರು, ಆಗಸ್ಟ್ 2 (ಕರ್ನಾಟಕ ವಾರ್ತೆ)

ಸೆಪ್ಟೆಂಬರ್–2018ಕ್ಕೆ ಅವಧಿ ಮುಕ್ತಾಯವಾಗುವ ರಾಜ್ಯದ 105 ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆಗೆ ರಾಜ್ಯ ಚುನಾವಣಾ ಆಯೋಗವು ವೇಳಾಪಟ್ಟಿಯನ್ನು ಪ್ರಕಟಿಸಿದ್ದು ಆಗಸ್ಟ್ 29 ರಂದು ಚುನಾವಣೆ ಮತ್ತು ಸೆಪ್ಟೆಂಬರ್ 1 ರಂದು ಮತ ಎಣಿಕೆ ನಡೆಯಲಿದೆ ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತರಾದ ಪಿ.ಎನ್.ಶ್ರೀನಿವಾಸಾಚಾರಿ ಅವರು ತಿಳಿಸಿದರು.

ಇಂದು ಆಯೋಗದ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಅವಧಿ ಪೂರ್ಣಗೊಂಡಿರುವ ರಾಜ್ಯದ ಒಟ್ಟು 108 ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕಿತ್ತು. ಮೈಸೂರು, ತುಮಕೂರು ಹಾಗೂ ಶಿವಮೊಗ್ಗ ನಗರ ಪಾಲಿಕೆಗಳ ಮೀಸಲಾತಿ ವಿಷಯ ನ್ಯಾಯಾಲಯದಲ್ಲಿರುವ ಕಾರಣಕ್ಕೆ ಈ ಮೂರು ನಗರ ಪಾಲಿಕೆಗಳನ್ನು ಹೊರತುಪಡಿಸಿ ಉಳಿದ 105 ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಹಮ್ಮಿಕೊಳ್ಳಲಾಗಿದೆ. ಎರಡನೇ ಹಂತದ ಚುನಾವಣೆಯನ್ನು ಮುಂದಿನ ಮಾರ್ಚ್‌ನಲ್ಲಿ ನಡೆಸಲಾಗುವುದು ಎಂದರು.

ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆ ಹೊರಡಿಸುವ ಮತ್ತು ನಾಮಪತ್ರಗಳನ್ನು ಸಲ್ಲಿಸಲು ಪ್ರಾರಂಭ (ಶುಕ್ರವಾರ) 10–08–2018, ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನ (ಶುಕ್ರವಾರ) 17–08–2018, ನಾಮಪತ್ರಗಳನ್ನು ಪರಿಶೀಲಿನೆ ಶನಿವಾರ 18–08–2018, ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನ (ಸೋಮವಾರ) 20–08–2018, ಮತದಾನ (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00

ಗಂಟೆಯವರೆಗೆ (ಶುಕ್ರವಾರ) 29-08-2018., ಮರು ಮತದಾನ (ಸಮಯ ಬೆಳಿಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆವರೆಗೆ) (ಶುಕ್ರವಾರ) 31-08-2018), ಮತ ಎಣಿಕೆ (ಬೆಳಿಗ್ಗೆ8.00 ಗಂಟೆಯಿಂದ) ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ( ಶನಿವಾರ ) 01-09-2018.

ಸದಾಚಾರ ಸಂಹಿತೆಯು ತಕ್ಷಣದಿಂದ ಜಾರಿಗೆ ಬರುತ್ತದೆ ಹಾಗೂ ದಿನಾಂಕ 01-09-2018 ರವರೆಗೆ ಆಯಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜಾರಿಯಲ್ಲಿರುತ್ತದೆ.

ರಾಜ್ಯ ಚುನಾವಣಾ ಆಯೋಗವು 2013 ರಲ್ಲಿ ರಾಜ್ಯದ ಒಟ್ಟು 208 ನಗರ ಸ್ಥಳೀಯ ಸಂಸ್ಥೆಗಳಿಗೆ ಸಾರ್ವತ್ರಿಕ ಚುನಾವಣೆಯ ನಡೆಸಲಾಗಿತ್ತು. ಇವುಗಳ ಅವಧಿಯು ಸೆಪ್ಟೆಂಬರ್ 2018 ರಿಂದ ಮಾರ್ಚ್ – 2019 ರವರೆಗೆ ಮುಕ್ತಾಯಗೊಳ್ಳಲಿರುವುದರಿಂದ ಎರಡು ಹಂತಗಳಲ್ಲಿ ಚುನಾವನೆ ನಡೆಸಬೇಕಾಗಿರುತ್ತದೆ.

ಈ ಮಧ್ಯೆ ಸರ್ಕಾರವು 26 (ಇಪ್ಪತ್ತಾರು) ನಗರ ಸ್ಥಳೀಯ ಸಂಸ್ಥೆಗಳನ್ನು ಉನ್ನತೀಕರಿಸಿದೆ ಹಾಗೂ 4 (ನಾಲ್ಕು) ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಪರಿವರ್ತಿಸಿದೆ. ಇವರುಗಳನ್ನು ಒಳಗೊಂಡಂತೆ ಒಟ್ಟು 22 ಜಿಲ್ಲೆಗಳಲ್ಲಿ ಪ್ರಥಮ ಹಂತದಲ್ಲಿ 105 ನಗರ ಸ್ಥಳೀಯ ಸಂಸ್ಥೆಗಳಿಗೆ (29 ನಗರಸಭೆಗಳು, 53 ಪುರಸಭೆಗಳು ಹಾಗೂ 23 ಪಟ್ಟಣ ಪಂಚಾಯಿತಿಗಳು) ಚುನಾವಣೆ ನಡೆಸಲಾಗುತ್ತಿದೆ.

**ಚುನಾವಣೆ ನಡೆಯುತ್ತಿರುವ 105 ನಗರ ಸ್ಥಳೀಯ ಸಂಸ್ಥೆಗಳು ವಿವರ:**

ನಗರಸಭೆಗಳು – 29, ಪುರಸಭೆಗಳು – 53 ಹಾಗೂ ಪಟ್ಟಣ ಪಂಚಾಯಿತಿಗಳು – 23 ಸೇರಿದಂತೆ ಒಟ್ಟು 105

ಬೆಂಗಳೂರು ನಗರ, ಬೆಂಗಳೂರು (ಗ್ರ), ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಧಾರವಾಡ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮೊದಲನೆ ಹಂತದಲ್ಲಿ ಚುನಾವಣೆ ಇರುವುದಿಲ್ಲ.

**ವಾರ್ಡ್‌ಗಳು:**

ಪ್ರಥಮ ಹಂತದಲ್ಲಿ 105 ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯುತ್ತಿದ್ದು ವಾರ್ಡುಗಳು ವಿವರ ಇಂತಿದೆ.

29–ನಗರಸಭೆಗಳ ವಾರ್ಡ್ ಸಂಖ್ಯೆ – 927, 53 ಪುರಸಭೆಗಳ ವಾರ್ಡ್‌ಗಳ ಸಂಖ್ಯೆ – 1,247 ಹಾಗೂ 23–ಪಟ್ಟಣ ಪಂಚಾಯಿತಿಗಳ ವಾರ್ಡ್‌ಗಳ ಸಂಖ್ಯೆ 400 ಒಟ್ಟು 2,574 ವಾರ್ಡ್‌ಗಳು ಸೇರಿವೆ.

**<u>105 ನಗರ ಸ್ಥಳೀಯ ಸಂಸ್ಥೆಗಳ ಮತದಾರರ ಸಂಖ್ಯೆ:</u>**

29 ನಗರ ಸಭೆಗಳಲ್ಲಿ ಪುರುಷರು – 9,94,754,. ಮಹಿಳೆಯರು 10,11,711, ಇತರೆ – 243 ಒಟ್ಟು 20,06,708, 53 ಪುರಸಭೆಗಳಲ್ಲಿ ಪುರುಷರು – 6,41,799, ಮಹಿಳೆಯರು 6,34,358, ಇತರೆ 97 ಸೇರಿ ಒಟ್ಟು 12,76,254 ಹಾಗೂ 23 – ಪಟ್ಟಣ ಪಂಚಾಯಿತಿಗಳಲ್ಲಿ ಪುರುಷರು – 1,59,448, ಮಹಿಳೆಯರು 1,61,267, ಇತರೆ 14 ಸೇರಿ ಒಟ್ಟು 3,20,729.

ಒಟ್ಟು ನಗರ ಸ್ಥಳೀಯ ಸಂಸ್ಥೆಗಳು ಸೇರಿ ಪುರುಷರು 17,96,001, ಮಹಿಳೆಯರು 18,07,336, ಇತರೆ 354 ಸೇರಿ ಒಟ್ಟು 36,03,691.

**<u>ಮತಗಟ್ಟೆಗಳ ಸಂಖ್ಯೆ:</u>**

29 – ನಗರಸಭೆ – 2,067 ಮತಗಟ್ಟೆ 53 – ಪುರಸಭೆ–1,422 ಮತಗಟ್ಟೆ ಹಾಗೂ 23–ಪಟ್ಟಣ ಪಂಚಾಯಿತಿ – 408 ಸೇರಿ ಒಟ್ಟು 3,897 ಮತಗಟ್ಟೆಗಳು ಇವೆ.

**ಚುನಾವಣಾ ವೀಕ್ಷಕರು ನೇಮಕಾತಿ:** ಮೇಲ್ಕಂಡ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಒಟ್ಟು 7 ಐ.ಎ.ಎಸ್. ಅಧಿಕಾರಿಗಳನ್ನು ವಿಶೇಷ ವೀಕ್ಷಕರನ್ನಾಗಿ, 25 ಕೆ.ಎ.ಎಸ್. (ಹಿರಿಯ ಶ್ರೇಣಿ) ಯ ಅಧಿಕಾರಗಳನ್ನು ಸಾಮಾನ್ಯ ವೀಕ್ಷಕರನ್ನಾಗಿ ಹಾಗೂ 30 ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಜಂಟಿ ನಿಯಂತ್ರಕರು ಮತ್ತು ಉಪ ನಿಯಂತ್ರಕರನ್ನು ಚುನಾವಣಾ ವೆಚ್ಚ ವೀಕ್ಷಕರನ್ನಾಗಿಯೂ ನೇಮಕ ಮಾಡಲಾಗಿದೆ.

ಈ ಚುನಾವಣೆಗೆ ಪೊಲೀಸ್ ಸಿಬ್ಬಂದಿಗಳನ್ನು ಒಲಗೊಂಡಂತೆ ಅಂದಾಜು 36,000 ಅಧಿಕಾರಿ/ಸಿಬ್ಬಂದಿಗಳನ್ನು ಚುನಾವಣಾ ಕಾರ್ಯಕ್ಕಾಗಿ ನಿಯೋಜಿಸಲಾಗುತ್ತಿದೆ.

**ಮತಯಂತ್ರಗಳ (ಇ.ವಿ.ಎಂ.) ಬಳಕೆ:** ಮತಯಂತ್ರಗಳನ್ನು ಬಳಸಿ ಈ ಚುನಾವಣೆಯನ್ನು ನಡೆಸಲಾಗುತ್ತಿದೆ. ಚುನಾವಣೆ ನಡೆಯುತ್ತಿರುವ 105 ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಾಗಿ ಒಟ್ಟು 4,640 ಬ್ಯಾಲೆಟ್ ಯೂನಿಟ್‌ಗಳನ್ನು ಹಾಗೂ 4,940 ಕಂಟ್ರೋಲ್ ಯೂನಿಟ್‌ಗಳನ್ನು ಸಿದ್ಧಗೊಳಿಸಲಾಗಿರುತ್ತದೆ.

**ಅಭ್ಯರ್ಥಿಗಳ ಚುನಾವಣಾ ವೆಚ್ಚಮಿತಿ** : ಸರ್ಕಾರದ ಅಧಿಸೂಚನೆ No:UDD:122:MLR:2010 Bengaluru, Daed: 11-02-2011 ರಲ್ಲಿ ಅಭ್ಯರ್ಥಿಗಳ ಚುನಾವಣಾ ವೆಚ್ಚದ ಗರಿಷ್ಠ ಮಿತಿಯು ಈ ಕೆಳಕಂಡಂತಿದೆ.

ನಗರಸಭೆ ವೆಚ್ಚಮಿತಿ 2.00 ಲಕ್ಷ ರೂ. ಪುರಸಭೆ ವೆಚ್ಚಮಿತಿ 1.50 ಲಕ್ಷ ಹಾಗೂ ಪಟ್ಟಣ ಪಂಚಾಯಿತಿ 1.00 ಲಕ್ಷ ರೂ. ಗಳಾಗಿರುತ್ತದೆ.

ವಿಶೇಷ ಕ್ರಮಗಳು:

NOTA : ರಾಜ್ಯ ಚುನಾವಣಾಅಯೋಗವು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ವ್ಯಕ್ತಿಯು, ಇಚ್ಚೆಯಂತೆ "ಯಾರೊಬ್ಬರಿಗೂ ತನ್ನಮತ ನೀಡಲು ಇಚ್ಫೆ ಇರುವುದಿಲ್ಲ" ಎಂಬ ತನ್ನ ತೀರ್ಮಾನವನ್ನು ರಹಸ್ಯವಾಗಿ ಮತ ಚಾಲಯಿಸುವ ಮೂಲಕ ವ್ಯಕ್ತಪಡಿಸಲು ಅನುಕೂಲವಾಗುವಂತೆ ಮತಪತ್ರದಲ್ಲಿ ಕೊನೆಯ ಅಭ್ಯರ್ಥಿಯ ನಂತರದ ಪ್ಯಾನಲ್‌ನಲ್ಲಿ 'NOTA' /ಮೇಲ್ಕಮಂಡ ಯಾರೂ ಅಲ್ಲ" ಎಂದು ಮುದ್ರಿಸಲಾಗಿರುತ್ತದೆ.

ಭಾವಚಿತ್ರವಿರುವ ಮತಪತ್ರ: ನಗರ ಸ್ಥಳೀಯ ಸಂಸ್ಥೆಗಳು ಚುನಾವಣೆಯಲ್ಲಿ ಒಂದೇ ವಾರ್ಡಿನಲ್ಲಿ ಒಂದೇ ಹೆಸರಿನ ಅಭ್ಯರ್ಥಿಗಳು ಸ್ಪರ್ಧಿಸುವ ಸಂದರ್ಭಗಳಿರುವುದರಿಂದ, ಅಭ್ಯರ್ಥಿಗಳನ್ನು ಗುರುತಿಸಲು ಮತಪತ್ರದಲ್ಲಿ ಅವರ ಹೆಸರಿನ ಮುಂದೆ ಅವರ ವೃತ್ತಿ ಅಥವಾ ವಿಳಾಸ ಇತ್ಯಾದಿಗಳನ್ನು ತೋರಿಸಲಾಗುತ್ತಿತ್ತು. ಆದರೂ ಸಹ ಮತದಾರನಿಗೆ ಗೊಂದಲ ಉಂಟಾಗುವುದನ್ನು ತಪ್ಪಿಸಲು ಮತಪತ್ರದಲ್ಲಿ ಎಲ್ಲಾ ಅಭ್ಯರ್ಥಿಗಳ ಹೆಸರಿನ ಮುಂದೆ ಅವರ ಇತ್ತೀಚಿನ ಭಾವಚಿತ್ರ ಮುದ್ರಿಸುವಂತೆ ಕ್ರಮ ಕೈಗೊಳ್ಳಲಾಗಿದೆ.

ಪರಿಷ್ಕೃತ ಪ್ರಮಾಣ ಪತ್ರ: ಮತದಾರನಿಗೆ ಅಭ್ಯರ್ಥಿಯ ಪೂರ್ವಾಪರಗಳನ್ನು ತಿಳಿದುಕೊಳ್ಳಲು ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯು ತನ್ನ ಹಿನ್ನೆಲೆ, ಚರಾಸ್ತಿ ಮತ್ತು ಸ್ಥಿರಾಸ್ತಿಗಳ ವಿವರಗಳು ಇರುವ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗಿತ್ತು. ಈಗ ಅದರೊಂದಿಗೆ ತನ್ನ ಸ್ವವಿವರ ವಿದ್ಯಾರ್ಹತೆ ಆದಾಯದ ಮೂಲಗಳನ್ನು ತಿಳಿಸಲು ಪರಿಷ್ಕೃತ ನಮೂನೆಯಲ್ಲಿ ಪ್ರಮಾಣ ಪತ್ರ (Affidavit) ಸಲ್ಲಿಸಬೇಕಾಗಿರುತ್ತದೆ.

ಭಾವಚಿತ್ರವಿರುವ ಮತದಾರರ ಚೀಟಿ : ಚುನಾವಣೆಯಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರಿರುವ ಪ್ರತಿಯೊಬ್ಬ ಮತದಾರನಿಗೆ ಅವರ ವಾರ್ಡಿನ ಸಂಖ್ಯೆ, ಮತದಾರರ ಪಟ್ಟಿಯ ಭಾಗದ ಸಂಖ್ಯೆ, ಮತದಾರರ ಪಟ್ಟಿ ಕ್ರಮ ಸಂಖ್ಯೆ, ಮತಗಟ್ಟೆಯ ಸಂಖ್ಯೆ ಮತ್ತು ಹೆಸರು/ವಿಳಾಸ, ಮತದಾನದ ದಿನಾಂಕ, ಮತದಾನದ ಸಮಯ, ಇತ್ಯಾದಿ ಮಾಹಿತಿಗಳಿರುವ

“ಭಾವಚಿತ್ರವಿರುವ ಮತದಾರರ ಚೀಟಿ” ಯನ್ನು ನೀಡಲು ಉದ್ದೇಶಿಸಿದ್ದು, ಜಿಲ್ಲಾ ಚುನಾವಣಾಧಿಕಾರಿಗಳು ಈ ಮತದಾರರ ಚೀಟಿಗಳನ್ನು ಮುದ್ರಿಸಿ ಬಿ.ಎಲ್.ಒ. ಗಳ ಮೂಲಕ ಸಂಬಂಧಪಟ್ಟ ಮತದಾರರಿಗೆ ವಿತರಣೆ ಮಾಡಲು ತಿಳಿಸಿದೆ.

ಕಾನೂನು ಮತ್ತು ಸುವ್ಯವಸ್ಥೆ: ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆಯ ಬಂದೋಬಸ್ತ್ ಹಾಗೂ ಕಾನೂನು ಸುವ್ಯವಸ್ಥೆಯನ್ನು ನೋಡಿಕೊಳ್ಳಲು ರಾಜ್ಯ ಪೊಲೀಸ್ ಇಲಾಖೆಯ ಸಹಕಾರವನ್ನು ಪಡೆದುಕೊಳ್ಳಲಾಗುತ್ತಿದೆ.

ಚುನಾವಣಾ ಅಧಿಸೂಚನೆ : ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಆಯೋಗವು ಆದೇಶಿಸಿದ ಚುನಾವಣಾ ವೇಳಾಪಟ್ಟಿಯನ್ನು ಅನುಸರಿಸಿ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳ ಚುನಾವಣೆ) ನಿಯಮಗಳು, 1977 ರ ನಿಯಮ 8 ರಂತೆ ಚುನಾವಣಾ ಅಧಿಸೂಚನೆಯನ್ನು ಹೊರಡಿಸುವರು.

ರಾಜ್ಯ ಚುನಾವಣಾಅಯೋಗವು ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆ – 2018 ನ್ನು ಶಾಂತಿ ಮತ್ತು ಸುವ್ಯವಸ್ಥೆಯಿಂದ ನಡೆಸಲು ಎಲ್ಲಾ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಹಾಗೂ ಸಾರ್ವಜನಿಕರು ಸಹಕಾರ ನೀಡುವಂತೆ ರಾಜ್ಯ ಚುನಾವಣಾ ಆಯೋಗದ ಆಯುಕ್ತರು ಮನವಿ ಮಾಡಿದರು.

## 5 ಜಿಲ್ಲೆಗಳಲ್ಲಿ ಮರು ಭೂಮಾಪನಕ್ಕೆ ಕಂದಾಯ ಸಚಿವರ ಆದೇಶ
### *ಹಾಸನ, ಬೆಳಗಾವಿ, ಉತ್ತರಕನ್ನಡ, ರಾಮನಗರ, ತುಮಕೂರು ಆಯ್ಕೆ*

ಬೆಂಗಳೂರು, ಆಗಸ್ಟ 02, 2018-

ರಾಜ್ಯದ ಹಾಸನ, ಬೆಳಗಾವಿ, ಉತ್ತರ ಕನ್ನಡ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಮರುಭೂಮಾಪನ ಕಾರ್ಯವನ್ನು ಕೈಗೆತ್ತಿಕೊಳ್ಳುವಂತೆ ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಆರ್ವಿ ದೇಶಪಾಂಡೆ ಆದೇಶಿಸಿದ್ದಾರೆ.

ಈ ಸಂಬಂಧ ಹೊರಡಿಸಿರುವ ಆದೇಶದಲ್ಲಿ ಅವರು, ``ಮರುಭೂಮಾಪನ ಮತ್ತು ಟಿಪ್ಪಣಿಗಳ ಗಣಕೀಕರಣ ಮಾಡುವ ಈ ಯೋಜನೆಗೆ ಕೇಂದ್ರ ಸರಕಾರವು ಡಿಐಎಲ್ಆರ್ಎಂಪಿ (ಡಿಜಿಟಲ್ಇಂಡಿಯಾಲ್ಯಾಂಡ್ರೆಕಾರ್ಡ್ಸ್ಮಾರ್ಡರ್ನೈಸೇಷನ್ಪ್ರೋಗ್ರಾಂ) ಯೋಜನೆಯಡಿ ಒಟ್ಟು 24.12 ಕೋಟಿರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದೆ,'' ಎಂದು ತಿಳಿಸಿದ್ದಾರೆ.

ಮರುಭೂಮಾಪನ ಯೋಜನೆಯಡಿ, ಇಲಾಖೆಯಲ್ಲಿ ಲಭ್ಯವಿರುವ ಹಳೆಯ ಮೂಲ ದಾಖಲೆಗಳನ್ನು ಇಂದೀಕರಣ (ಅಪ್‌ಡೇಟಿಂಗ್) ಮಾಡಲು ಉದ್ವೇಶಿಸಲಾಗಿದೆ. ಇದರ ಪ್ರಕಾರ,

ಆಧುನಿಕ ಸಾಧನಗಳ ಮೂಲಕ ಭೂಮಿಯ ಅಳತೆ ಕಾರ್ಯವನ್ನು ನಡೆಸಬೇಕು ಎಂದು ಸಚಿವ ದೇಶಪಾಂಡೆಯವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದಾ .

ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರು ಜುಲೈ 5ರಂದು ಮಂಡಿಸಿದ ಬಜೆಟ್‌ನಲ್ಲಿ ಕೂಡ, ರಾಜ್ಯದೆಲ್ಲೆಡೆ ಹಂತಹಂತವಾಗಿ ಮರುಭೂಮಾಪನ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಘೋಷಿಸಿದ್ದನ್ನು ಇಲ್ಲಿಸ್ಮರಿಸಬಹುದು.

ಈ ಮಧ್ಯೆರಾಜ್ಯದ 14 ಜಿಲ್ಲೆಗಳ 27 ಗ್ರಾಮಗಳಲ್ಲಿ ಖಾಸಗಿ ಸಂಸ್ಥೆಗಳೊಂದಿಗೆ ಪ್ರಾಯೋಗಿಕವಾಗಿ ಮರು ಭೂಮಾಪನ ಕಾರ್ಯವನ್ನು ನಡೆಸಲಾಗಿತ್ತು. ಈ ಅನುಭವದ ಹಿನ್ನೆಲೆಯಲ್ಲಿ, ಕೇಂದ್ರ ಸರಕಾರ ನೀಡಿರುವ ಅನುದಾನವನ್ನು ಬಳಸಿಕೊಂಡು 5 ಜಿಲ್ಲೆಗಳಲ್ಲಿ ಮರು ಭೂಮಾಪನ ಕೈಗೊಳ್ಳಲು ತೀರ್ಮಾನಿಸಲಾಗಿದೆ ಎಂದು ಸಚಿವರು ವಿವರಿಸಿದ್ದಾರೆ.

# ಪಹಣಿ ಲೋಪದೋಷ ಸರಿಪಡಿಸಲು ಕಂದಾಯ ಅದಾಲತ್

## ಸಚಿವ ಆರ್ವಿ ದೇಶಪಾಂಡೆ ಆದೇಶ

ಬೆಂಗಳೂರು, ಆಗಸ್ಟ್ 2,

2018-ಗಣಕೀಕೃತ ಪಹಣಿಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು, ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯಾದ್ಯಂತ ಮುಂದಿನ 6 ತಿಂಗಳ ಕಾಲ ಕಂದಾಯಅದಾಲತ್ನಡೆಸುವಂತೆ ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಆರ್ವಿ ದೇಶಪಾಂಡೆ ಆದೇಶಿಸಿದ್ದಾರೆ.

ಈ ಸಂಬಂಧವಾಗಿ ಹೊರಡಿಸಿರುವ ಆದೇಶದಲ್ಲಿ ಅವರು, ``ಎಲ್ಲತಾಲ್ಲೂಕುಗಳ ಗ್ರಾಮಲೆಕ್ಕಾಧಿಕಾರಿಗಳ ವೃತ್ತಮಟ್ಟದಲ್ಲಿ ಪಹಣಿಗಳಲ್ಲಿರುವ ತಪ್ಪುಗಳನ್ನು ತ್ವರಿತಗತಿಯಲ್ಲಿ ಸರಿಪಡಿಸಬೇಕು. ಈ ಉದ್ದೇಶಕ್ಕಾಗಿ ಆಗಸ್ಟ 1ರಿಂದ ಜಾರಿಗೆ ಬರುವಂತೆ ಮುಂದಿನ 6 ತಿಂಗಳಕಾಲ, ಅಂದರೆ 2019ರ ಜನವರಿ 31ರವರೆಗೆ ಕಂದಾಯ ಅದಾಲತ್ನಡೆಸಬೇಕು,'' ಎಂದುಸೂಚಿಸಿದ್ದಾರೆ.

``ಈ ಹಿಂದೆ ನೀಡಿದ್ದ ಪಹಣಿ ತಿದ್ದುಪಡಿ ಅಧಿಕಾರವು ಎರಡು ದಿನಗಳ ಹಿಂದೆ, ಅಂದರೆ ಜುಲೈ 31ಕ್ಕೆ ಕೊನೆಗೊಂಡಿದೆ. ಇಷ್ಟರ ಮಧ್ಯೆ ಹೆಚ್ಚಿನ ಪಹಣಿಗಳಲ್ಲಿ ಕಾಲಂ 3 ಮತ್ತು ಕಾಲಂ 9ಕ್ಕೆ ಸಂಬಂಧಿಸಿದ ನಮೂದುಗಳಲ್ಲಿ ವ್ಯತ್ಯಾಸವಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಕಂದಾಯ ಅದಾಲತನ್ನು ಮತ್ತೆ ವಿಸ್ತರಿಸುವ ಈ ಕ್ರಮಕೈಗೊಳ್ಳಲಾಗಿದೆ,'' ಎಂದು ಸಚಿವರು ವಿವರಿಸಿದ್ದಾರೆ.